# ರಕುಲ್ ಟ್ವಿಟ್ಟರ್ ಕುಟುಕು



‘ಗಿಲ್ಲಿ’ ಕನ್ನಡ ಚಿತ್ರದ ಮೂಲಕ ಬಣ್ಣದಲೋಕಕ್ಕೆ ಕಾಲಿಟ್ಟವರು ನಟಿ ರಕುಲ್ ಪ್ರೀತ್ ಸಿಂಗ್. ಪಂಜಾಬಿ ಕುಟುಂಬದ ಕುಡಿಯಾದರೂ ಮಹತ್ವಾಕಾಂಕ್ಷಿ. ಮಾಡೆಲಿಂಗ್ ರ್‍ಯಾಂಪ್‌ನಿಂದ ಚಿತ್ರರಂಗದ ಫೋಕಸ್ ಲೈಟ್ ಅಡಿಗೆ ಬಂದ ಅವರು ನೋಡನೋಡುತ್ತಲೇ ತೆಲುಗು ಸಿನಿಮಾಗಳಲ್ಲಿ ಸ್ಟಾರ್ ನಟರಿಗೂ ಜೋಡಿಯಾದರು. ಆಮೇಲೆ ಹಿಂದಿ ಚಿತ್ರರಂಗದಲ್ಲಿ ಅದೃಷ್ಟದ ಪರೀಕ್ಷೆಗೆ ಇಳಿದರು. ಮುಂಬೈನಲ್ಲಿ ನೆಲೆಗೊಂಡು ನಾಲ್ಕೈದು ಚಿತ್ರಗಳಲ್ಲಿ ಅಭಿನಯಿಸಿದ ಮೇಲೆ ಅವರಿಗೆ ಸಹಜವಾಗಿಯೇ ದಕ್ಷಿಣ ಭಾರತದ ಚಿತ್ರಗಳಲ್ಲಿ ನಟಿಸುವಷ್ಟು ಬಿಡುವು ಇರಲಿಲ್ಲ. 2020ರಲ್ಲಿ ನಿತಿನ್ ಜತೆ ಅವರ ಅಭಿನಯದ ತೆಲುಗು ಚಿತ್ರ ತೆರೆಕಂಡಿತಾದರೂ ಹಿಟ್ ಆಗಲಿಲ್ಲ.

ಇತ್ತೀಚೆಗೆ ಮಾಧ್ಯಮವೊಂದರಲ್ಲಿ ರಕುಲ್ ಪ್ರೀತ್ ಸಿಂಗ್ ಅವರಿಗೆ ತೆಲುಗಿನಲ್ಲಿ ಅವಕಾಶಗಳಿಲ್ಲ ಎಂಬ ಸುದ್ದಿ ಪ್ರಕಟವಾಯಿತು. ಇದನ್ನು ಓದಿದ್ದೇ ಅವರಿಗೆ ನಖಶಿಖಾಂತ ಉರಿದುಹೋಯಿತು. ‘ಏಕಕಾಲದಲ್ಲಿ ಆರು ಸಿನಿಮಾ ಅವಕಾಶಗಳನ್ನು ಮುಂದಿಟ್ಟುಕೊಂಡಿರುವ ನಾನು ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಯೋಚಿಸುವಷ್ಟು ಬ್ಯುಸಿಯಾಗಿದ್ದೇನೆ. ಅದಕ್ಕೆ ಹೀಗೆ ಬರೆದವರೂ ನೆರವಾಗಬಹುದು’ ಎಂದು ವ್ಯಂಗ್ಯದ ಧಾಟಿಯಲ್ಲಿ ಅವರು ಟ್ವಿಟ್ಟರ್‌ನಲ್ಲಿ ಪ್ರತಿಕ್ರಿಯಿಸಿದ್ದಾರೆ.

‘ಅಯ್ಯಾರಿ’, ‘ದೇ ದೇ ಪ್ಯಾರ್ ದೇ’ ಹಿಂದಿ ಚಿತ್ರಗಳಲ್ಲಿ ರಕುಲ್ ಕೆಲಸವನ್ನು ವಿಮರ್ಶಕರು ಮೆಚ್ಚಿಕೊಂಡರು. ಅದರ ನಂತರ ಅವಕಾಶ ಸಿಗದ ಸ್ಥಿತಿಯಲ್ಲಿ ರಕುಲ್ ಇಲ್ಲ. ಮೂವತ್ತರ ಪ್ರಾಯದ ಅವರು ಇವತ್ತಿಗೂ ಶ್ರದ್ಧೆಯಿಂದ ವರ್ಕ್‌ಔಟ್ ಮಾಡುತ್ತಾರೆ. ಹಾಗೆ ವರ್ಕ್‌ಔಟ್‌ಗೆ ಹೋಗುವಾಗ ಸೆಲೆಬ್ರಿಟಿಗಳ ಜಾಡು ಹಿಡಿಯುವ ಮಾಧ್ಯಮಗಳ ಕ್ಯಾಮೆರಾ ಕಣ್ಣುಗಳಿಗೂ ಕಾಣಿಸಿಕೊಳ್ಳುತ್ತಿರುತ್ತಾರೆ. ಡ್ರಗ್ಸ್ ಪ್ರಕರಣದಲ್ಲಿ ತಮ್ಮ ಹೆಸರು ಕೇಳಿಬಂದಾಗಲೂ ಅವರು ಎದೆಗುಂದದೆ ಮತ್ತೆ ಎಂದಿನ ಹಳಿಗೆ ಮರಳಿದವರು.

ಕೃಷ್ ನಿರ್ದೇಶನದ ಹೆಸರಿಡದ ತೆಲುಗು ಚಿತ್ರವೊಂದರ ಭಾಗವಾಗಿರುವ ರಕುಲ್, ತಾವೇ ಹೇಳಿಕೊಂಡಂತೆ ಸದಾ ಒಂದಿಲ್ಲೊಂದು ಸ್ಕ್ರಿಪ್ಟ್ ಓದಿ, ಒಪ್ಪಿಗೆ ಸೂಚಿಸುವುದರಲ್ಲಿ ನಿರತರಾಗಿದ್ದಾರೆ. ಚಿತ್ರೀಕರಣ ಮುಗಿಸಿರುವ ಸಿನಿಮಾಗಳು ತೆರೆಕಾಣುವ ದಿನ ಬೇಗ ಒದಗಿಬರಲಿ ಎಂಬ ನಿರೀಕ್ಷೆಯಲ್ಲಿ ಅನೇಕರಂತೆ ಅವರೂ ಇದ್ದಾರೆ.

# ಹಾಲಿವುಡ್‌ಗೆ ‘ವಿದ್ಯುತ್’ ಪೂರೈಕೆ



ಕಟೆದ ದೇಹ. ದೃಢ ನಿಲುವು. ಬಾಗುವ ಅಂಗೋಪಾಂಗ. ಬ್ರೂಸ್ ಲೀ ಕಣ್ಣುಗಳ ನೆನಪಿಸುವ ನೋಟ. ಜಾಕಿ ಚಾನ್, ಜೆಟ್ ಲೀ ವೇಗದ ಸ್ಮರಣೆಯೊಡ್ಡುವ ಚಲನೆ. ಮಾರ್ಷಲ್ ಆರ್ಟ್ಸ್ ಅನ್ನು ತಾದಾತ್ಮ್ಯದಿಂದ ಅಭ್ಯಾಸ ಮಾಡಿದ ವಿರಳರಲ್ಲಿ ಒಬ್ಬರಾಗಿರುವ ವಿದ್ಯುತ್ ಜಾಮ್‌ವಾಲ್ ಅವರನ್ನು ನೋಡಿದಾಗ ಇಂತಹ ವ್ಯಕ್ತಿಚಿತ್ರ ಕಣ್ಮುಂದೆ ಬರುತ್ತದೆ. ಇದರಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆ ಇಲ್ಲ. ದೇಸಿ ಸಿನಿಮಾಗಳಲ್ಲಿ ಪ್ರತಿನಾಯಕನಾಗಿ ಹೆಚ್ಚು, ನಾಯಕನಾಗಿ ಕಡಿಮೆ ಚಿತ್ರಗಳಲ್ಲಿ ನಟಿಸಿರುವ ಅವರೀಗ ಹಾಲಿವುಡ್‌ಗೆ ಜಿಗಿದಿದ್ದಾರೆ. ಟೋನಿ ಜಾ, ಮೈಕಲ್ ಜಾ ವೈಟ್ ಹಾಗೂ ಡಾಲ್ಫ್ ಲ್ಯುಂಡ್‌ಗ್ರೆನ್ ತರಹದ ನಟರೊಟ್ಟಿಗೆ ಅಭಿನಯಿಸಲು ಅವಕಾಶ ಪಡೆದಿರುವ ಭಾರತದ ಏಕೈಕ ನಟ ಇವರಾಗಿದ್ದಾರೆ. ವಂಡರ್ ಸ್ಟ್ರೀಟ್ ಎಂಬ ಪ್ರತಿಭಾ ನಿರ್ವಹಣಾ ಏಜೆನ್ಸಿಯು ತಂತಾನೇ ಇಂತಹ ಅವಕಾಶವನ್ನು ಇವರಿಗೆ ಒದಗಿಸಿದೆ.

‘ಕಮಾಂಡೊ’ ಸರಣಿ ಚಿತ್ರಗಳು, ‘ಖುದಾ ಹಾಫಿಜ್’, ‘ಜಂಗ್ಲಿ’ ಸಿನಿಮಾಗಳ ಆ್ಯಕ್ಷನ್ ಪ್ರಧಾನ ದೃಶ್ಯಗಳಲ್ಲಿ ಮಿಂಚಿದ್ದವರು ವಿದ್ಯುತ್. ಬಾಲ್ಯದಿಂದಲೇ ಮಾರ್ಷಲ್ ಆರ್ಟ್ಸ್ ಹಾಗೂ ಕಲರಿಪಯಟ್ಟು ಅಭ್ಯಾಸ ಮಾಡಿ, ಈ ಪರಿಯ ದೇಹಾಕಾರವನ್ನು ರೂಪಿಸಿಕೊಂಡಿರುವ ಪ್ರತಿಭಾವಂತ.

‘ಸಾಕಷ್ಟು ಬೆವರು ಹರಿಸಿ ಬೆಳೆದಿರುವ ದಿಗ್ಗಜರ ಜತೆ ಹಾಲಿವುಡ್‌ನಲ್ಲಿ ಅಭಿನಯಿಸುವ ಅವಕಾಶ ಸಿಕ್ಕಿರುವುದು ನನ್ನ ಭಾಗ್ಯ. ಅವರೆಲ್ಲರೊಟ್ಟಿಗೆ ಸಿಗಬಹುದಾದ ಅನುಭವಕ್ಕಾಗಿ ನಾನು ಉತ್ಸುಕನಾಗಿದ್ದೇನೆ’ ಎನ್ನುವ ವಿದ್ಯುತ್ ಮಹತ್ವಾಕಾಂಕ್ಷಿ.

‘ತುಪಾಕಿ’ ತಮಿಳು ಚಿತ್ರದ ಪ್ರತಿನಾಯಕನಾಗಿ ಅವರು ತಣ್ಣನೆಯ ಕಾಡುವ ಅಭಿನಯ ತುಳುಕಿಸಿದ್ದನ್ನು ಕಂಡ ಪ್ರೇಕ್ಷಕರಿಗೆ ಹಾಲಿವುಡ್ ಪ್ರವೇಶ ಹೇಗಿರುತ್ತದೆ ಎಂಬ ಕುತೂಹಲವಿದೆ.

■ ವಿಶಾಖ ಎನ್.